**◆ ಐವತ್ತರ ದಶಕದಲ್ಲಿ ಬಹುತೇಕ ಕುಟುಂಬಗಳಲ್ಲಿ ಮಹಿಳೆಯರನ್ನು ನಾಟಕ ನೋಡಲು ಕಳಿಸುತ್ತಿದ್ದುದೇ ಅಪರೂಪವಾಗಿತ್ತು. ಅಂತಹ ಮನಸ್ಥಿತಿಯನ್ನು ದಾಟಿ ತುಂಬು ಕುಟುಂಬದಿಂದ ರಂಗಭೂಮಿ ಕ್ಷೇತ್ರಕ್ಕೆ ನೀವು ಕಾಲಿಟ್ಟಿರಿ. ಇದೇ ಕ್ಷೇತ್ರವನ್ನೇ ಆಯ್ಕೆ ಮಾಡಿಕೊಂಡದ್ದು ಏಕೆ?**

ಹಳ್ಳಿಯಲ್ಲಿ ಆಡುವ ನಾಟಕಗಳನ್ನು ವೀಕ್ಷಿಸಲು ಮಹಿಳೆಯರಿಗೆ ನಮ್ಮ ಮನೆಯಲ್ಲಿ, ನಮ್ಮ ಊರಲ್ಲಿಯೂ ನಿಷೇಧ ಇರಲಿಲ್ಲ. ಪುರುಷರಿಗೆ ಸಮನಾಗಿ ಮಹಿಳೆಯರೂ ನಾಟಕ ನೋಡಲು ಬರುತ್ತಿದ್ದರು. ಆದರೆ ಹಳ್ಳಿಯ ಕೃಷಿಕ ಕುಟುಂಬದ ಮಹಿಳೆಯರು ಪಾತ್ರ ಮಾಡುತ್ತಿದ್ದುದು ಅಪರೂಪ. ನಮ್ಮಂತಹ ವೃತ್ತಿ ಕಲಾವಿದೆಯರು ಮಾಡುತ್ತಿದ್ದೆವು. ನಮ್ಮೂರು ಮರಿಯಮ್ಮನಹಳ್ಳಿ ನಾಟಕಗಳಿಗೆ ಹೆಸರುವಾಸಿ. ನಾನು ನಾಟಕ ಕ್ಷೇತ್ರವನ್ನೇ ಆಯ್ಕೆ ಮಾಡಿಕೊಂಡದ್ದು ಬದುಕಿನ ಅನಿವಾರ್ಯತೆಗಾಗಿ.

1960-65ರ ಮಧ್ಯದಲ್ಲಿ, ನನಗಾಗ ಹತ್ತು ವರ್ಷ. ಅಪ್ಪ ಮಾರಪ್ಪನಿಗೆ ದಲಾಲಿ ಅಂಗಡಿಯ ಚಿಕ್ಕದೊಂದು ಗುಮಾಸ್ತರ ಕೆಲಸ. ನನಗೆ ಐವರು ತಂಗಿಯರು, ಒಬ್ಬ ತಮ್ಮ. ನಾನೇ ಮನೆಯಲ್ಲಿ ದೊಡ್ಡವಳು. ಇದ್ದ ತುಂಡು ಹೊಲದಲ್ಲಿ ಅವ್ವ ದುಡಿಯುತ್ತಿದ್ದಳು, ಬೇರೆಯವರ ಹೊಲಕ್ಕೂ ಕೂಲಿಗೆ ಹೋಗುತ್ತಿದ್ದಳು. ನಾನು ವಾರದಲ್ಲಿ ಐದು ದಿನ ಶಾಲೆಗೆ, ಎರಡು ದಿನ ಕೂಲಿಗೆ ಹೋಗುತ್ತಿದ್ದೆ. ಶಾಲೆಯಲ್ಲಿ ಕೊಟ್ಟ ಎರಡು ರೊಟ್ಟಿಯನ್ನು ತಮ್ಮ- ತಂಗಿಯರಿಗೆ ಕೊಟ್ಟು ಹಂಚಿ ತಿನ್ನುತ್ತಿದ್ದೆ. ಕೆಲವೊಮ್ಮೆ ನನಗೆ ಉಳಿಯುತ್ತಿರಲಿಲ್ಲ. ಅರೆ ಉಪವಾಸವೇ ಗತಿಯಾಗುತ್ತಿತ್ತು.

ಅಪ್ಪ ಮಾಡುತ್ತಿದ್ದ ಬಯಲಾಟದಲ್ಲಿ ಆಗಾಗ ನಾನೂ ಮುಖಕ್ಕೆ ಬಣ್ಣ ಹಚ್ಚುತ್ತಿದ್ದೆ. ಚಿಕ್ಕವಳಿದ್ದಾಗಿನಿಂದಲೂ ನನಗೆ ಹಾಡು, ನೃತ್ಯ ಎಂದರೆ ಇಷ್ಟ. ಶಾಲೆಯ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಅನೇಕ ಬಾರಿ ಬಹುಮಾನ ಪಡೆಯುತ್ತಿದ್ದೆ. ನಮ್ಮೂರಿನ ಮೈಲಾರಪ್ಪ ಎಂಬುವರು ಆಗ 'ಸಂಸಾರ' ಎಂಬ ನಾಟಕ ಮಾಡಿಸಿದರು. ಅದರಲ್ಲಿ ಅಭಿನಯಿಸಿದೆ. ನಾಟಕ ನೋಡಿದ ಅಪ್ಪ ಮೆಚ್ಚಿಕೊಂಡು 'ನಾಟಕದಿಂದ ಮನೆ ನಡೆಸಬಹುದು ಮಗಳೇ... ತಮ್ಮ ತಂಗಿಯರನ್ನು ಓದಿಸಬಹುದು...' ಎಂದು ಸೂಕ್ಷ್ಮವಾಗಿ ಹೇಳಿದರು. ಅದೇ ವೇಳೆಗೆ ಅಪ್ಪ ಅಂಗಡಿಯಲ್ಲಿ ಮಾಡಿದ ತಪ್ಪು ಲೆಕ್ಕದ ನೆಪದ ಮೇಲೆ ಕೆಲಸ ಹೋಯಿತು. ಅಪ್ಪನಿಗೆ ಆಗಲೇ ಕಾಯಿಲೆ ಶುರುವಾಯಿತು. ಅಪ್ಪನಿಗೆ ಆ ದಲಾಲಿ ಅಂಗಡಿಯಲ್ಲಿ ತಿಂಗಳಿಗೆ ನೂರು ರೂಪಾಯಿ ಪಗಾರ. ನಾನು ನಾಟಕಕ್ಕೆ ಹೋದರೆ ಒಂದು ನಾಟಕಕ್ಕೆ 25 ರೂಪಾಯಿ ಸಂಭಾವನೆ ಸಿಗುತ್ತಿತ್ತು. ಅವನು ತಿಂಗಳಿಗೆ ಗಳಿಸುತ್ತಿದ್ದುದನ್ನು ನಾನು ನಾಲ್ಕೇ ದಿನದಲ್ಲಿ ಸಂಪಾದಿಸುತ್ತಿದ್ದೆ. ಹಾಗಾಗಿ ನಾಟಕಗಳಿಗೆ ಹೋಗುವುದೇ ಚಲೋ ಎನಿಸಿತು. ಬಂಡವಾಳವಿಲ್ಲದ ಕಸುಬು. ಹಾಗಾಗಿ ಶಾಲೆಗೆ ಚಕ್ಕರ್ ಕೊಟ್ಟು ನಾಟಕವಾಡಲು ಹೋಗುತ್ತಿದ್ದೆ. ಶಾಲೆಗೆ ನಿಯಮಿತವಾಗಿ ಹೋಗದಂತಾದಾಗ ಮೇಷ್ಟ್ರು ಬೈಸಿಕೊಂಡೆ. ನಾನು ತರುವ ಹಣದಿಂದ ಮನೆಗೆ ಆರ್ಥಿಕ ನೆರವು ಸಿಕ್ಕಿತು. ಇಷ್ಟವೋ, ಕಷ್ಟವೋ, ನನ್ನ ಗಮನಕ್ಕೇ ಬರಲಿಲ್ಲ. ಮನೆ ನಿಭಾಯಿಸುವ ಜವಾಬ್ದಾರಿಯೊಂದೇ ಕಣ್ಣ ಮುಂದಿತ್ತು. ಅದಕ್ಕಾಗಿ ಈ ಕ್ಷೇತ್ರ ಆಯ್ಕೆ ಮಾಡಿಕೊಂಡೆ.

**◆ ಒಕ್ಕಲುತನದ ಕುಟುಂಬದಲ್ಲಿ ಹುಟ್ಟಿ, ಮನೆಯ ವಾತಾವರಣಕ್ಕಿಂತ ಭಿನ್ನವಾದ ಆಸಕ್ತಿ ಹಾಗೂ ಅನಿವಾರ್ಯತೆಯಿಂದ ನಾಟಕಕ್ಕೆ ಪ್ರವೇಶ ಮಾಡಿದ ನೀವು ರಂಗಭೂಮಿಯಿಂದಲೇ ಬದುಕು ಕಟ್ಟಿಕೊಂಡು, ಇಲ್ಲಿಯೇ ಉಳಿಯುವಂತೆ ಮಾಡಿದ ಅಂಶಗಳೇನಾದರೂ ಇವೆಯೇ?**

ಮೂಲ ಬೇರು ನನ್ನ ಪಾತ್ರದೊಳಗಿನ ತಲ್ಲೀನತೆ. 'ಸಂಸಾರ' ನಾಟಕವಾಡಿದ ಕೆಲ ದಿನಗಳ ನಂತರ ನಮ್ಮ ಊರಿನ ಹಿರಿಯರು ಮಾಡಿದ 'ಸತ್ಯ ಹರಿಶ್ಚಂದ್ರ' ನಾಟಕದಲ್ಲಿ ಲೋಹಿತಾಶ್ವನ ಪಾತ್ರ ನೀಡಿದರು. ನನ್ನ ಉದ್ದನೆಯ ಕೂದಲನ್ನು ಗಂಟು ಹಾಕಿ ಕಟ್ಟಿದ್ದರು. ನನ್ನ ಪಾತ್ರದ ಹಿಂದೆ ಆರತಿ ಹಿಡಿದು ನಿಂತವರಿಂದ ನನ್ನ ಕೂದಲಿಗೆ ಬೆಂಕಿ ತಾಗಿತು. ಕೂದಲು ಸುಟ್ಟು ವಾಸನೆ ಬರುತ್ತಿದ್ದರೂ ನನಗದರ ಪರಿವೇ ಇಲ್ಲ. ಸುಮ್ಮನೇ ಹಾಡುತ್ತಿದ್ದೇನೆ. ಅದನ್ನು ನೋಡಿದ ಅಪ್ಪ, ಒಮ್ಮೆಲೇ ರಂಗಸ್ಥಳದ ಮೇಲೆ ಬಂದು ಕೈಯಿಂದ ಆ ಬೆಂಕಿ ಆರಿಸಿದಾಗಲೇ ನಾನು ಪಾತ್ರದಿಂದ ಹೊರಬಂದು ಎಚ್ಚರಗೊಂಡದ್ದು.

ಮತ್ತೊಮ್ಮೆ ಹಂಪಾಸಾಗರದಲ್ಲಿ ಜಾತ್ರೆಯಿತ್ತು. ಆ ಜಾತ್ರೆಗೆ ನಮ್ಮೂರಿನ ತಂಡದವರು 'ಕತ್ತಲು ಬೆಳಕು'